ಮೈಸೂರ ಗೆಜಿಟ

ಸರ್ಕಾರದಿಂದ ಪಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಸೆಪ್ಟಂಬರ್ ತಾ|| 7, ಸ್ರ್ 1889.

"ಪಾ" ಈ ಭಾಗವನ್ನು ಪ್ರತ್ಯೇಕ ಕೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಜೀಫ್ ಜಡ್ಜ್ಗೀರು, ವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫೈನಾನ್ಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ ಷರಾ ಬರೆಯಲ್ಪಡಬಹುದೂಂಥಾ ಸದರೀ ಸೂಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್‌ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಕ್ಷೇಸ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜಾ ಮಾಡಿರುವವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸಿನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ರೂಪ್ಟಿಕೇಟಾದ ಡಿವಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಕ್ಷೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಪಡಿಸ್ಕ್,
ಕಾಂಪ್ಟ್ರೋಲರ್.

ಫಾರೆಸ್ಟ್ ಇಲಾಖಾ.

ತಾರೀಖು 27ನೇ ಆಗಸ್ಟ್ 1889.

1878ನೇ ಇಸವಿ ಫಾರೆಸ್ಟ್ ರೂಲ್ಸ್ 9ನೇ ಸೆಕ್ಷರ್ಷ ಅನುಸರಿಸಿ ತುಮಕೂರು ಡಿಸ್ಟ್ರಿಕ್ಟ್ ದೇವರಾಯದುರ್ಗ ಸ್ಟೇಟ್ ಫಾರೆಸ್ಟ್‌ಗೆ ಹೊಸದಾಗಿ ಕೇರಿಸಿಕೊಂಡು 22 ಗಜ ಅಗಲ ಡಿವಾರ್ಕೇರ್ಷ ಲೈನ್ ಮಾಡಿರುವ ದೊಡ್ಡವಾಡೀ ಪಟ್ಟದ ಗುಡಿಗಳು ಸಕಲಜನರ ತಿಳುವಳಿಕೆ ಬಗ್ಯೆ ಫಾಯಿಷ್ ಮಾಡಲ್ಪಟ್ಟಿರುತ್ತೆ.

ವೃತ್ತರಕ್ಕೆ.

ಲಿಂಗ್ಯಹಳ್ಳಿ ಗ್ರಾಮದ ಸರ್ವೆ ನಂಬರ್ 21—31—36—39—46 ಮತ್ತು ಬೋವೇನಹಳ್ಳಿ ಗ್ರಾಮದ 48 ಮತ್ತು 49ನೇ ನಂಬರುಗಳು.